ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)
ಗುರುವಾರ, ದಿನಾಂಕ: 08ನೇ ಜನವರಿ, 2026

ಸಂಖ್ಯೆ: **54**

"ಪಿ.ಆರ್.ಎಸ್. ಶಾಸನ ಸಂಶೋಧನಾ ಸಂಸ್ಥೆ**"**ಯ ವತಿಯಿಂದ ದಿನಾಂಕ:19&20ನೇ ಜನವರಿ, 2026ರಂದು ನವದೆಹಲಿಯಲ್ಲಿ ಎರಡು ದಿನಗಳ ಕಾಲ ನಡೆಯಲಿರುವ **"Public Finances"** ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳ ವಿಧಾನ ಮಂಡಲದ ಶಾಸಕರುಗಳಿಗೆ ಕಾರ್ಯಾಗಾರವನ್ನು ಆಯೋಜಿಸಲಾಗಿರುತ್ತದೆ. **ಸದರಿ ತರಬೇತಿ ಕಾರ್ಯಾಗಾರದ ನೋಂದಣಿ ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.**

ಮೇಲ್ಕಂಡ ಕಾರ್ಯಾಗಾರಕ್ಕೆ ಸಚಿವಾಲಯದ ವತಿಯಿಂದ ಈಗಾಗಲೇ ದಿನ ಭತ್ಯೆ/ಪ್ರಯಾಣ ಭತ್ಯೆ ಸೌಲಭ್ಯಗಳೊಂದಿಗೆ ಕಳುಹಿಸಲಾಗಿರುವ / ನಿಯೋಜಿಸಲ್ಪಟ್ಟಿರುವ ಶಾಸಕರುಗಳನ್ನು ಹೊರತುಪಡಿಸಿದಂತೆ ಹೆಸರು ನೋಂದಾಯಿಸಿಕೊಂಡ ಮಾನ್ಯ ಶಾಸಕರುಗಳ ಪೈಕಿ ಜೇಷ್ಠತೆಗೆ ಅನುಸಾರವಾಗಿ ಮೊದಲು ಆರು ಜನ ಶಾಸಕರುಗಳನ್ನು ತರಬೇತಿ ಕಾರ್ಯಾಗಾರಕ್ಕೆ ನಿಯೋಜಿಸಲಾಗುವುದು ಹಾಗೂ ಲಭ್ಯವಿರುವ ದಿನಭತ್ಯೆ/ಪ್ರಯಾಣ ಭತ್ಯೆಯನ್ನು ಪಾವತಿಸಲಾಗುವುದು.

ಆಸಕ್ತಿಯುಳ್ಳ ಮಾನ್ಯ ಶಾಸಕರುಗಳು ವಿಧಾನ ಪರಿಷತ್ತಿನ ಶಾಸನ ರಚನಾ ಶಾಖೆಗೆ (ಮೊದಲನೇ ಮಹಡಿಯ ಕೊಠಡಿ ಸಂಖ್ಯೆ:105) ದಿನಾಂಕ:012.01.2026ರೊಳಗಾಗಿ ಮಾಹಿತಿಯನ್ನು ನೀಡಬೇಕೆಂದು ಕೋರಲಾಗಿದೆ.

ಕೆ.ಆರ್.ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.